ಹಾಲಿನ ಶೀತಲ ಕೇಂದ್ರದ ಸ್ಥಾಪನೆ ಬಗ್ಗೆ.

೩೩೩. **ಶ್ರೀ ಐ. ಬಿ. ಶಂಕರ್** (ಚಿಕ್ಕಮಗಳೂರು).—ಮಾನ್ಯ ಪಶುಸಂಗೋಪನಾ ಮಂತ್ರಿಯವರು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಕ್ಕಮಂಗಳೂರು ಜಿಲ್ಲೆಯಲ್ಲಿ ಹಾಲಿನ ಶೀತಲ ಕೇಂದ್ರವನ್ನು ಸ್ಥಾಪಿಸಲು ತೀರ್ಮಾನಿಸಲಾಗಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈವರೆಗೂ ಸದರಿ ಕೇಂದ್ರವು ಪ್ರಾರಂಭವಾಗದಿರಲು ಕಾರಣಗಳೇನು?

ಶ್ರೀ ಸಿದ್ದರಾಮಯ್ಯ (ಪಶುಸಂಗೋಪನಾ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು).—

ಅ) ಬಂದಿದೆ.

ಆ) ಆ ಪ್ರದೇಶದಲ್ಲಿ ಹಾಲಿನ ಶೇಖರಣೆ ಅಭಾವದಿಂದ ಈವರೆಗೆ ಪ್ರಾರಂಭ ಮಾಡಲಾಗಿಲ್ಲ.

ಶ್ರೀ ಐ. ಬಿ. ಶಂಕರ್ —ಮಾನ್ಯ ಅಧ್ಯಕ್ಷರೇ, ನಾನು ಪುನರಪಿಮಾಡಿಕೊಳ್ಳುವುದೇನೆಂದರೆ, ತಾವು ಸಾಕಷ್ಟು ಈ ಐ.ಆರ್.ಡಿ.ಪಿ. ಕಾರ್ಯಕ್ರಮದ ಕೆಳಗೆ ಅಭಿವೃದ್ಧಿಯನ್ನು ಮಾಡಿದ್ದೀರಿ. ವಿಶೇಷವಾಗಿ ನಮ್ಮಲ್ಲಿ ಹಾಲಿನ ಉತ್ಪಾದನೆ ಮೊದಲಿಗಿಂತಲೂ ೫೦ ಪರ್ಸೆಂಟ್ ಜಾಸ್ತಿಯಾಗಿದೆ. ನಾನು ಮೊನ್ನೆ ನನ್ನ ಕ್ಷೇತ್ರದ ಅಂಬಳೆ ಗ್ರಾಮಕ್ಕೆ ಹೋದಾಗ ಅಲ್ಲಿ ಒಂದೇ ಒಂದು ಗ್ರಾಮದಲ್ಲಿ ಕನಿಷ್ಟ ೫೦ ಹಸುಗಳು ಇದ್ದವು. ಅವರುಗಳು ನನ್ನ ಹತ್ತಿರ ತಮ್ಮ ಕಷ್ಟಗಳನ್ನು ತೋಡಿಕೊಳ್ಳುತ್ತಾ—ಸ್ವಾಮಿ ನವಂಗೆ ಹಾಲಿನ ಶೇಖರಣೆ ಮಾಡಲು ವ್ಯವಸ್ಥೆ ಮಾಡಿಕೊಟ್ಟಿಲ್ಲ. ಸರಕಾರ ಎಲ್ಲದಕ್ಕೂ ಉತ್ತಮವಾದ ಕ್ರಮ ತೆಗೆದುಕೊಂಡಿದೆ, ಆದರೆ ಹಾಲಿನ ಶೇಖರಣೆಗೆ ವ್ಯವಸ್ಥೆ ಇಲ್ಲದಾಗಿದೆ. ಈ ಕಾರ್ಯಕ್ರಮದಲ್ಲಿ ಉಳಿದ ಎಲ್ಲಾ ಗ್ರಾಮಗಳನ್ನು ತೆಗೆದುಕೊಂಡಿದ್ದು ನಮ್ಮ ಗ್ರಾಮವೊಂದಕ್ಕೆ ಮಲತಾಯಿ ಧೋರಣೆ ತಾಳಿದ್ದೀರಿ ಏಕೆ ಎಂದು ಕೇಳುತ್ತಾರೆ. ಅದಕ್ಕಾಗಿ ನಾನು ಅಧಿಕಾರಿಗಳನ್ನು ಕೇಳಿದಾಗ, ಅವರು ನನಗೆ–ತಾವುಗಳು ಸಚಿವರೊಂದಿಗೆ ಈ ವಿಷಯ ಮಾತನಾಡಬೇಕು ನಮಗೆ ಏನೂ ಹೇಳುವುದಕ್ಕಾಗುವುದಿಲ್ಲ ಎಂದು ಹೇಳಿದರು. ಆದುದರಿಂದ ಅದಕ್ಕೆ ಒಂದು ವ್ಯವಸ್ಥೆ ಮಾಡುತ್ತೀರಾ ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ.— ಅಧ್ಯಕ್ಷರೇ, ೮–೧೧–೮೪ರಲ್ಲಿ ಕೆಲವು ಷರತ್ತುಗಳೊಡನೆ ಈ ಒಂದು ಹಾಲಿನ ಶೀತಲೀಕರಣ ಕೇಂದ್ರವನ್ನು ಸ್ಥಾಪನೆಮಾಡಬೇಕೆನ್ನತಕ್ಕಂತಹ ಒಂದು ಒಪ್ಪಂದ ಆಗಿತ್ತು. ೧೦ ಸಾವಿರ ಲೀಟರ್ ತಲುಪುವವರೆಗೆ ಜಿಲ್ಲಾ ಅಭಿವೃದ್ಧಿ ಮಂಡಳಿಯವರು ಆ ಖರ್ಚನ್ನು ಭರಿಸಬೇಕೆನುವಂತಹ ಒಂದು ಷರತ್ತನ್ನು ಹಾಕಿದ್ದೆ ಜಿಲ್ಲಾಧಿಕಾರಿಗಳೊಡನೆ ಚರ್ಚಿಸಿ ಈ ಒಂದು ಒಪ್ಪಂದಕ್ಕೆ ತಾವು ಬರುವುದಾದರೆ ಜಿಲ್ಲಾಧಿಕಾರಿಗಳಿಗೆ ಈ ಒಂದು ಕೇಂದ್ರವನ್ನು ಮಾಡಬೇಕು ಎಂದು ಸೂಚನೆ ಕೊಟ್ಟಿದ್ದೇವೆ. ಆದರೆ ಇಲ್ಲಿಯವರೆಗೆ ನಾವು ಒಪ್ಪಿಕೊಂಡಿದ್ದೇವೆ ಎನ್ನುವ ಒಂದು ತೀರ್ಮಾನ ಆವರಿಂದ ಬಂದಿರಲಿಲ್ಲ. ಆ ಕಾರಣದಿಂದ ಮಾಡಲಿಕ್ಕೆ ಆಗಲಿಲ್ಲ. ಈಗ ೧೯೮೫–೮೬ರಲ್ಲಿ ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯವರು ಏನು ಇದರ ವೆಚ್ಚ ೧,೨೫,೮೦೦ ಆಗುತ್ತದೆ ಇದರಲ್ಲಿ ಅರ್ಧಭಾಗದಷ್ಟು ಹಣವನ್ನು ಪೆಡರೇಶನ್‌ನವರು ಕೊಡತಕ್ಕದ್ದೆಂದು ಇಟ್ಟಿದ್ದಾರೆ. ಆದರೆ ನಾವು ಪೂರ್ಣ ಹಣವನ್ನು ನೀವೇ ಕೊಡಬೇಕೆಂದು ಹೇಳಿದ್ದೇವೆ, ಈಗಲಾದರೂ ಕೂಡ ಮಾನ್ಯ ಸದಸ್ಯರೇ ಆವರ ಜೊತೆಗೆ ಸಂಪರ್ಕ ಮಾಡಿ ಪೂರ್ಣ ಹಣ ೧,೨೫,೮೦೦ ರೂಗಳನ್ನು ಅವರು ಕೊಡಿಸುವುದಾದರೆ, ನಾವು ಹಾಲಿನ ಶೀತಲೀಕರಣ ಪ್ರಾರಂಭ ಮಾಡುತ್ತೇವೆ. ಎನ್ನತಕ್ಕಂತಹ ಮಾತನ್ನು ಹೇಳುತ್ತೇನೆ.

೩೩೪. **ಶ್ರೀ ಬಸವರಾಜ ಪಾಟೀಲ್ ಅನ್ವರಿ** (ಮಾನ್ವಿ).—ಈ ಕೆಳಗಿನ ಪ್ರಶ್ನೆಗಳಿಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು ಉತ್ತರಿಸುವರೆ?

ಅ) ಮಾನ್ವಿ ತಾಲ್ಲೂಕಿನಲ್ಲಿರುವ ಕುಡಿಯುವ ನೀರಿನ ಕೊರತೆಯಿರುವ ಹಳ್ಳಿಗಳನ್ನು ಗುರುತಿಸಲಾಗಿದೆಯೆ? ಹಾಗಿದ್ದಲ್ಲಿ ಸದರಿ ಹಳ್ಳಿಗಳು ಯಾವುವು?

ಆ) ಆ ಪೈಕಿ ಈಗಾಗಲೇ ನೀರಿ ಸರಬರಾಜು ಯೋಜನೆ ಮಂಜೂರಾಗಿರುವ ಹಳ್ಳಿಗಳು ಯಾವುವು?

೫) ಮಂಜೂರಾತಿ ದೊರೆತಿರುವ ಕಡಕಲ್, ಕವಿತಾಳ, ಹಿರೇಕೊಟ್ನಕಲ್, ಮತ್ತು ಭೋಗವತಿ ಗ್ರಾಮಗಳಲ್ಲಿನ ನೀರು ಸರಬರಾಜು ಯೋಜನೆ ಯಾವ ಹಂತದಲ್ಲಿದೆ?

ಶ್ರೀ ಬಿ.ಆರ್. ಯಾವಗಲ್ (ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ೨೨ ಹಳ್ಳಿಗಳನ್ನು ಗುರುತಿಸಲಾಗಿದೆ.ಸದರಿ ಹಳ್ಳಿಗಳ ಪಟ್ಟಿಯನ್ನು ಇದಕ್ಕೆ ಲಗತ್ತಿಸಲಾಗಿದೆ.

ಆ) ಹಳ್ಳಿಗಳ ಹೆಸರು : ೧) ಕವಿತಾಳ್, ೨) ಚಿಕ್ಕ ಕೊಟ್ನಿಕಲ್, ೩) ಭೋಗವತಿ, ೪) ಉಂಬ್ಳಿ ಹೆಸೂರು ೫) ಉಡಬಾಳೆ-ಬುದ್ದಾಪುರ.

೧) ಕಡಕಲ್ ಈ ಗ್ರಾಮವು ಉಪ್ಪು ನೀರು ಸಿಗುವ ಪ್ರದೇಶದಲ್ಲಿರುವುದರಿಂದ ಇನ್‌ಟೇಕ್ ವೆಲ್ ಅನ್ನು ಸೂಚಿಸಲಾಗಿಲ್ಲ. ರೈಸಿಂಗ್ ಮೈನ್ ಡಿಸ್ಟ್ರಿಬ್ಯೂಷನ್ ನೀರಿ ನಟ್ಯಾಂಕ್ ಕೆಲಸವನ್ನು ಪ್ರಾರಂಭ ಮಾಡಲಾಗಿದೆ. ಸಾರ್ವಜನಿಕ ನೀರಿನ ಕೊಳಾಯಿಗಳ ಕೆಲಸ ಮುಗಿಯುವ ಹಂತದಲ್ಲಿದೆ.

೨) ಕವಿತಾಳ್ ಇದಕ್ಕೆ ಹದಿಮೂರು ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ರೈಸಿಂಗ್ ಮೈನ್, ಡಿಸ್ಟ್ರಿಬ್ಯೂಷನ್ ಕೆಲಸ ಮುಗಿದಿದೆ. ೨೫ ಸಾರ್ವಜನಿಕ ಕೊಳಾಯಿಗಳನ್ನು ಹಾಕಲಾಗಿದೆ. ನೀರಿನ ತೊಟ್ಟಿ ಮತ್ತು ಪಂಪ್‌ಹೌಸ್ ಕೆಲಸ ವಿವಿಧ ಹಂತದಲ್ಲಿದೆ. ಈ ಯೋಜನೆಯಿಂದ ನೇರವಾಗಿ ನೀರನ್ನು ಸರಬರಾಜು ಮಾಡಲಾಗುತ್ತಿದೆ.

೩) ಹಿರೇಕೊಟ್ನಕಲ್ ಮತ್ತು ಭೋಗವತಿ. ಈ ಬೇಲಿನ ಜಂಟಿ ಗ್ರಾಮಗಳಿಗೆ ನೇರವಾಗಿ ನೀರು ಸರಬರಾಜು ಮಾಡಲಾಗುತ್ತಿದೆ. ರೈಸಿಂಗ್ ಮೈನ್, ೧೮ ಸಾರ್ವಜನಿಕ ಕೊಳಾಯಿ ಕೆಲಸ ಪೂರ್ಣಗೊಂಡಿದೆ. ಭೂ ಮಟ್ಟದ ತೊಟ್ಟಿ ಕೆಲಸವು ನಡೆಯುತ್ತಿದೆ.

ನೀರಿನ ಕೊರತೆ ಇರುವ ಹಳ್ಳಿಗಳ ಹೆಸರುಗಳು.

(ಮಾನವಿ ತಾಲ್ಲೂಕು).—

೧. ಚಿಕ್ಕ ಕೋಟೇನಕಲ್
೨. ಕಾತರ್ಕಿ
೩. ಹೊಸೂರು ಉಂಬ್ಳಿ
೪. ದೇವಿಪುರ
೫. ಉತ್ಕ್ಯನೂರು
೬. ಚಿಕ್ಕದಿನ್ನಿ
೭. ಹಾಲಾಪುರ
೮. ಸುಂಕಮಂಡಿಕು
೯. ಜಾಗಮಾರನಹಳ್ಳಿ
೧೦. ಉದ್ದಾಳ ಬಂದ್ಲಾಪುರ
೧೧. ಭೋಗವತಿ
೧೨. ಅಮೀನಗಡ
೧೩. ಇರಕಲ್
೧೪. ಪಾಸಪುರ
೧೫. ಹರನಾಪುರ
೧೬. ದೇವಾಪಲ್ಲಿ
೧೭. ದೇವಟಗಲ್
೧೮. ಗುಡದಿನ್ನಿ (ಕಳಸಾ)
೧೯. ನವಲಕಲ್
೨೦. ಕೌತಾಳ್
೨೧. ಲಕ್ಕದಿನ್ನಿ
೨೨. ತೊಪ್‌ದೊರ (ಕಳಸ)

ಶ್ರೀ ಬಸವರಾಜ ಪಾಟೀಲ್ ಆನ್ವರಿ.— ಮಾನ್ಯ ಅಧ್ಯಕ್ಷರೇ ಅಲ್ಲಿನ ಸ್ಥಳೀಯ ಅಧಿಕಾರಿಗಳು ವತನ್ಯ ಮಂತ್ರಿಗಳಿಗೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ಮಾನ್ಯ ಮಂತ್ರಿಗಳು ತಮ್ಮ ಉತ್ತರ ದಲ್ಲಿ ಕೌತಾಳ ಗ್ರಾಮದಲ್ಲಿ ಕೈಗೊಂಡಿರುವಂತಹ ಕೆಲಸ ಎಲ್ಲಾ ಅರ್ಧಬಂರ್ಧವಾಗಿದೆ. ಅಲ್ಲಿನ ಕೆಲಸ ವನ್ನು ಮಾಡಿಸುತ್ತಿದ್ದ ಕಂಟ್ರಾಕ್ಟರ್ ಸರಿಯಾಗಿ ಕೆಲಸ ಮಾಡದೆ ಅವರಿಗೆ ಸರ್ಕಾರದವರು ನೋಟೀಸ್ ಸಹ ಕೊಡಲಾಗಿದೆ. ಬಹುತೇಃ ಇಲಾಖೆಯವರೇ ಮಾಡಬೇಕೆಂದು ಅಲ್ಲಿ ಜನ ಹೇಳುತ್ತಿದ್ದಾರೆ. ಮತ್ತೆ ಈ ಗ್ರಾಮದಲ್ಲಿ ಸಂಮಾರು ೧೦-೧೫ ಸಾವಿರ ಜನಸಂಖ್ಯೆ ಇದೆ. ಅಲ್ಲಿ ಎಲ್ಲಾ ಕಡೆ ಪೈಪ್‌ಗಳನ್ನು ಸಹ ಹಾಕಿದ್ದಾರೆ. ಜನರು ಆ ಪೈಪ್‌ಗಳನ್ನು ಕೊರೆದು ನಾಶ ಮಾಡಿದ್ದಾರೆ. ಆದ್ದರಿಂದ ದಯಮಾಡಿ ಮಾನ್ಯ ಮಂತ್ರಿಗಳು ತೀವ್ರಗತಿಯಲ್ಲಿ ಕೆಲಸವನ್ನು ಕಂಟ್ರಾಕ್ಟರ್ ಮುಖಾಂತರವಾಗಿ ಅಥವಾ ಇಲಾಖೆಯ ವತಿಯಿಂದಲೇ ಆಗಲಿ ಮಾಡಿಸಿಕೊಡಬೇಕು.

ಅಧ್ಯಕ್ಷರು.— ತಾವು ಪ್ರಶ್ನೆಯನ್ನು ಕೇಳಿ, ಈ ರೀತಿ ಭಾಷಣ ಮಾಡುತ್ತಾ ಹೋದರೆ ಹೇಗೆ ?

ಶ್ರೀ ಬಸವರಾಜ ಪಾಟೀಲ್ ಆನ್ವರಿ.— ಸ್ವಾಮಿ ತಾವು ನನಗೆ ಅವಕಾಶ ಕೊಡಬೇಕು. ಮಾನ್ಯ ಮಂತ್ರಿಗಳಿಗೆ ಸರ್ಕಾರದ ಅಧಿಕಾರಿಗಳು ತಪ್ಪು ಮಾಹಿತಿಯನ್ನು ಕೊಟ್ಟಿರುವಾಗ ನಾವು ವಿವರಿಸಿ ಹೇಳು ವುದಕ್ಕೆ ಅವಕಾಶ ಕೊಡದಿದ್ದರೆ ಹೇಗೆ ? ತಾವು ಪ್ರತಿಯೊಂದು ಸಾರಿ ಈ ರೀತಿ ವಾರ್ನಿಂಗ್ ಮಾಡು ವುದಾದರೆ ನಾವು ಪ್ರಶ್ನೆಯನ್ನು ಏತಕ್ಕೆ ಕಳುಹಿಸಿಕೊಡಬೇಕು ?

ಅಧ್ಯಕ್ಷರು.— ತಾವು ಪ್ರಶ್ನೆಯನ್ನು ಸರಿಯಾಗಿ ಸಂಕ್ಷಿಪ್ತವಾಗಿ ಕೇಳಿ,

ಶ್ರೀ ಬಸವರಾಜ ಪಾಟೀಲ್ ಆನ್ವರಿ.— ಸ್ವಾಮಿ ನಾನು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಸದನದಲ್ಲಿ ನಮ್ಮ ಹಕ್ಕನ್ನು ಕಸಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದರೆ ಹೇಗೆ ? ನಾವು ಬಹಳ ಗಂಭಿರವಾದ ವಿಷಯವನ್ನು ಪ್ರಸ್ತಾಪ ಮಾಡಬೇಕೆಂದು ಬಂದಿದ್ದೇವೆ. ತಾವು ಮಾತನಾಡುವುದು ಬೇಡವೆಂದು ಹೇಳಿದರೆ ನಾನು ಸುಮ್ಮನೆ ಕುಳಿತುಕೊಳ್ಳುತ್ತೇನೆ.

ಅಧ್ಯಕ್ಷರು.— ತಾವು ನೇರವಾಗಿ ಪ್ರಶ್ನೆಯನ್ನು ಕೇಳಿ.

ಶ್ರೀ ಎಂ. ಎಸ್. ಪಾಟೀಲ್.— ಮಾನ್ಯ ಅಧ್ಯಕ್ಷರೇ ತಮ್ಮಮೇಲೆ ಮಾನ್ಯ ಸದಸ್ಯರು ಆರೋಪ ಮಾಡುತ್ತಿದ್ದಾರೆ. ಇದು ಸರಿಯೇ ?

ಶ್ರೀ ಬಸವರಾಜ ಪಾಟೀಲ್ ಆನ್ವರಿ.— ಸ್ವಾಮಿ ನಾನು ಆರೋಪ ಮಾಡುತ್ತಿಲ್ಲ, ನಮ್ಮ ಹಕ್ಕು ಚಲಾಯಿಸುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಮಾತ್ರ ಕೇಳುತ್ತಿರುವುದು. ಇದು ಕುಡಿಯುವ ನೀರಿನ ಸಮಸ್ಯೆ. ಆದ್ದರಿಂದ ಕಳಕಳಿಯಿಂದ ನಾನು ಮತ್ತೊಮ್ಮೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನನಗೆ ಸ್ವಲ್ಪ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.— ಆಯಿತು ತಾವು ಪ್ರಶ್ನೆ ಕೇಳಿ.

ಶ್ರೀ ಬಸವರಾಜ ಪಾಟೀಲ್ ಆನ್ವರಿ.— ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಉತ್ತರದಲ್ಲಿ ಕಡುಕಲಿ ಗ್ರಾಮಕ್ಕೆ ನೀರು ಕೊಡಬೇಕೆಂದು ಯೋಜನೆ ಇದೆ. ಎಂದು ಹೇಳಿದ್ದಾರೆ ನಮ್ಮ ತಾಲ್ಲೂಕಿನಲ್ಲಿ ಪ್ರತಿವರ್ಷ ಬೇಸಿಗೆಯಲ್ಲಿ ಕುಡಿಯುವ ನೀರಿಗೆ ಬಹಳ ತೊಂದರೆಯನ್ನು ಸಾರ್ವಜನಿಕರು ಅನುಭವಿಸು ತ್ತಿದ್ದಾರೆ. ಅದೇ ರೀತಿಯಲ್ಲಿ ಬಸಾಪುರ ಗ್ರಾಮದಲ್ಲಿ ಕೂಡ ಕುಡಿಯುವ ನೀರಿಗೆ ಸಾರ್ವಜನಿಕರು ಬಹಳ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಈ ಮೂರು ಗ್ರಾಮಗಳಿಗೂ ಕೂಡ ಕುಡಿಯುವ ನೀರನ್ನು ಬೇಸಿಗೆಯಲ್ಲಿ ಲಾರಿಗಳಿಂದ ಒದಗಿಸಿಕೊಡುತ್ತಿದ್ದೇವೆ. ಅಲ್ಲಿ ಎಲ್ಲಾ ಉಪ್ಪು ನೀರು. ಕುಡಿಯುವ ನೀರಿನ ಸೋರ್ಸ್ ಇಲ್ಲದೆ ಇರುವುದರಿಂದ ಕ್ಯಾನಲ್ ಮೂಲಕ ಕುಡಿಯುವ ನೀರನ್ನು ಒದಗಿಸಿಕೊಡು ವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ಆರ್. ಯಾವಗಲ್.— ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಮಾತನಾಡುತ್ತಾ ಕವಿತಾಳ ಗ್ರಾಮದ ಬಗ್ಗೆ ಹೇಳಿದರು. ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಏನಾದರೂ ಕೆಲಸ ಆಗದೆ ನಿಂತಿದ್ದರೆ ಆ ಕೆಲಸವನ್ನು ಆದಷ್ಟು ತೀವ್ರಗತಿಯಲ್ಲಿ ಮುಗಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅದೇ ರೀತಿ ಕಡಕಲ್ ಗ್ರಾಮದ ಬಗ್ಗೆ ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ ಅದನ್ನೂ ಕೂಡ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇನ್ನು ಎರಡು ಮೂರು ಹಳ್ಳಿಗಳಲ್ಲಿ ಕುಡಿಯುವ

ನೀರಿಗೆ ಬಹಳ ತೊಂದರೆ ಇದೆ ಅಲ್ಲಿ ಕಾಲುವೆಗಳ ಮುಖಾಂತರವಾದರೂ ಕುಡಿಯುವ ನೀರನ್ನು ಒದಗಿಸಿ ಕೊಡಬೇಕೆಂದು ಸೂಚನೆ ಮಾಡಿದ್ದಾರೆ. ಇದೇ ರೀತಿಯ ಪರಿಸ್ಥಿತಿ ಅನೇಕ ಕಡೆಗಳಲ್ಲಿ ಇರುವುದರಿಂದ ಈ ಬಗ್ಗೆ ಒಂದು ಯೋಜನೆಯನ್ನು ತಯಾರು ಮಾಡಬೇಕೆಂದು ಸರ್ಕಾರ ಯೋಚನೆ ಮಾಡುತ್ತಿದೆ.

ಶ್ರೀ ಗೋಪಾಲ ಮುಂಕುಂದ ಕಾನಡೆ.— ಮಾನ್ಯ ಅಧ್ಯಕ್ಷರೇ ಎಷ್ಟು ವರ್ಷಗಳಿಂದ ಈ ರೀತಿ ನಡೆಯುತ್ತಿದೆ.

ಶ್ರೀ ಎಂ. ರಘುಪತಿ.— ಎರಡೂ ವರ್ಷಗಳಿಂದ ಈ ರೀತಿಯಲ್ಲಿ ನಡೆಯುತ್ತಿದೆ.

ಶ್ರೀ ಗೋಪಾಲ ಮುಕುಂದ ಕಾನಡೆ.— ಮಾನ್ಯ ಅಧ್ಯಕ್ಷರೇ ಎಷ್ಟು ವರ್ಷಗಳಲ್ಲಿ ಈ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎಂ. ರಘುಪತಿ.— ಈ ಬಗ್ಗೆ ನಾನು ಒಂದು ಸ್ಪಷ್ಟೀಕರಣವನ್ನು ಕೊಡುವುದಕ್ಕೆ ಬಯಸುತ್ತೇನೆ. ಈ ಪ್ರವೇಶ ಪರೀಕ್ಷೆಗಳು ಬಹಳ ಮುಖ್ಯವಾದಂಥ ಪರೀಕ್ಷೆಗಳು. ಈ ಪರೀಕ್ಷೆಗೆ ಎಲ್ಲಾ ಕಡೆಯಿಂದ ಪರೀಕ್ಷಕರನ್ನು ಕರೆಯಿಸುತ್ತೇವೆ. ಎಲ್ಲಾ ಇಲಾಖೆಗಳಿಂದಲೂ ಕರೆಯಿಸುತ್ತೇವೆ. ಆದ್ದರಿಂದ ಒಂದೇ ವಿಷಯ ಮಾಡುವುದಕ್ಕೆ ಸಾಧ್ಯವಿಲ್ಲ. ವಿಶೇಷವಾಗಿ ಡಿಪ್ಲೊಮೊ ಕೋರ್ಸಿನಲ್ಲಿ ಏನು ನ್ಯೂನತೆಗಳು ಇವೆ ಅವುಗಳನ್ನು ಸರಿಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅದೂ ಈ ವರ್ಷದಿಂದಲೇ ಪ್ರಯತ್ನ ಮಾಡುತ್ತೇವೆ.

ಶ್ರೀ ಗೋಪಾಲ ಮುಂಕುಂದ ಕಾನಡೆ.— ಇದರಲ್ಲಿ ಅನ್ಯಾಯವಾಗಿದೆ ಎಂದು ಸರ್ಕಾರದ ಗಮನಕ್ಕೆ ಬರಲಿಲ್ಲವೆ ?

ಶ್ರೀ ಎಂ. ರಘುಪತಿ.— ಬಂದಿದೆ. ಅದಕ್ಕೆ ಪರಿಶೀಲನೆ ಮಾಡೋಣವೆಂದು ಹೇಳಿದೆ.

ಶ್ರೀ ಗೋಪಾಲ ಮುಂಕುಂದ ಕಾನಡೆ.— ಎಷ್ಟು ವರ್ಷಗಳೊಳಗಾಗಿ ಮಾಡುತ್ತೀರಿ ?

ಶ್ರೀ ಎಂ. ರಘುಪತಿ.— ಈ ವರ್ಷವೇ ಮಾಡೋಣವೆಂದೂ ಹೇಳಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.— ಈ ಡಿಪ್ಲೋಮಾ ಕೋರ್ಸ್‌ಗಳು ಏನಿವೆ ಈ ಕೋರ್ಸ್‌ಗೆ ಎಸ್. ಎಸ್. ಎಲ್. ಸಿ. ಮತ್ತು ಪಿ. ಯು. ಸಿ. ಪಾಸು ಮಾಡಿಕೊಂಡು ಬರುತ್ತಾರೆ. ಪಾಸಾಗದೆ ಇರುವವರು ಕೂಡ ಒಂದು ವರ್ಷದ, ಎರಡು ವರ್ಷದ ಡಿಪ್ಲಮಾ ಕೋರ್ಸ್‌ಗಳನ್ನು ಮಾಡುತ್ತಾರೆ. ಇವರಿಬ್ಬರಲ್ಲಿ ತಾರತಮ್ಯ ಇಲ್ಲವೇ ? ತಾರತಮ್ಯವಿದೆಯೆಂದು ಕಂಡುಬಂದರೆ ಸರಿಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ರಘುಪತಿ.— ಸರಿ ಮಾಡೋಣವೆಂದು ನಾನು ಆಗಲೇ ಹೇಳಿದ್ದೇನೆ

ಗುಂಬ್ಜಿ ತಾಲ್ಲೂಕು ಕಡಬಾ ಗ್ರಾಮದ ಕಿರಿಯ ಕಾಲೇಜು

೪೯೮. ಶ್ರೀ ಜಿ. ಎಸ್. ಶಿವನಂಜಪ್ಪ (ಗುಂಬ್ಜಿ).— ಮಾನ್ಯ ವಿದ್ಯಾಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಗುಂಬ್ಜಿ ತಾಲ್ಲೂಕು ಕಡಬಾ ಗ್ರಾಮದಲ್ಲಿರುವ ಕಿರಿಯ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ?

ಆ) ಯಾವ ಯಾವ ವಿಷಯವನ್ನು ಬೋಧನೆ ಮಾಡಲಾಗುತ್ತಿದೆ ಮತ್ತು ಯಾವ ಯಾವ ವಿಚಾರದಲ್ಲಿ ಅಧ್ಯಾಪಕರುಗಳನ್ನು ನೇಮಕ ಮಾಡಲಾಗಿದೆ :

ಇ) ಅಧ್ಯಾಪಕರನ್ನು ನೇಮಕ ಮಾಡದೆ ಇರುವ ವಿಷಯಗಳಿಗೆ ಯಾವಾಗ ಅಧ್ಯಾಪಕರುಗಳನ್ನು ನೇಮಕ ಮಾಡಲಾಗುವುದು ?